# ಮಾನಸ ಗಂಗೋತ್ರಿ

ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

ಸಂಚಿಕೆ – 2 | ಸಂಪುಟ – 1 | 19 ಫೆಬ್ರವರಿ 2019 | ಪುಟಗಳು – 4

**ನುಡಿ**

ಕನಸು ಉಚಿತ. ಆದರೆ, ಗುರಿಗೆ ಬೆಲೆ ತೆರಬೇಕು. ಗುರಿ ಮುಟ್ಟಲು ಸಮಯ, ಪ್ರಯತ್ನ, ತ್ಯಾಗದ ಜೊತೆಗೆ ಬೆವರು ಹರಿಸಬೇಕು

**– ಉಸೇನ್ ಬೋಲ್ಟ್**

**ಒಳ ಪೆಟ್ಟಿಗೆ**

**ನೆನಪಿದೆಯಾ ಮೊದಲಾ ಭೇಟಿ..**



**ಪುಟ> 4**

**ಗಂಗೋತ್ರಿಯಲ್ಲಿ ಕಂಡ ರಾಮನ ಭಕ್ತರು!**



**ಪುಟ> 3**

**ಹೀಗೊಂದು ಕ್ಯಾಂಪಸ್ ಕಥೆಯಲ್ಲ.., ಜೀವನ**



**ಪುಟ> 4**

## ಜಾಗತೀಕರಣ ತಂತ್ರಜ್ಞಾನದಿಂದ ಜಾನಪದ ಕ್ಷೀಣಿಸುತ್ತಿದೆ : ಪ್ರೊ.ಅರವಿಂದ ಮಾಲಗತ್ತಿ



ಅರಕಲಗೂಡು ಜನಪದ ಕಥೆಗಳು ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಬಿಡುಗಡೆಗೊಳಿಸುತ್ತಿರುವುದು.

ಜನ ಪರ ಮತ್ತು ಜನರಿಲ್ಲದ ಜಾನಪದ ವಿಶ್ವ ವಿದ್ಯಾನಿಲಯಗಳು ಅನಾಥವಾಗುತ್ತಿದ್ದು ಜಾಗತೀಕರಣ ತಂತ್ರಜ್ಞಾನದಿಂದ ಜಾನಪದ ಕ್ಷೀಣಿಸುತ್ತಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ ಅಭಿಪ್ರಾಯ ಪಟ್ಟರು.

ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಅಖಿಲ ಭಾರತ ಸಂಶೋಧಕರ ಸಂಘದ ಸಂಯುಕ್ತಾ ಆಶ್ರಯದಲ್ಲಿ ಡಾ.ಕುಶಾಲ ಬರಗೂರ ಸಂಪಾದಿತ ಅರಕಲಗೂಡು ಜನಪದ ಕಥೆಗಳು ಕೃತಿಯ ಲೋಕಾರ್ಪಣೆ ಮತ್ತು ವಕ್ತ್ರ ಗಳಿಗೆ ಸಮಾರಂಭ ಉದ್ಘಾಟನೆ ಮಾಡಿ ಮಾತನಾಡಿದ ಅವರು ಭಾರತೀಯ ಜಾನಪದ ಪರಂಪರೆಯಲ್ಲಿ ಪ್ರಪಂಚದ ಪರಂಪರೆಯಲ್ಲಿ ಕರ್ನಾಟಕ ಜಾನಪದ ಕಲೆಗೆ ವಿಶಿಷ್ಟ ಸ್ಥಾನ ಮಾನವಿದೆ ಕರ್ನಾಟಕದಲ್ಲಿ ಸಂಗ್ರಹವಾದಷ್ಟು ಮಹಾಕಾವ್ಯಗಳು ಜಾನಪದ ಸಂಗ್ರಹ ಬೇರೆ ಯಾವ ರಾಜ್ಯದಲ್ಲೂ ಸಂಗ್ರಹವಾಗಿಲ್ಲ ಎಂದು ಹೇಳಿದರು.

ಶ್ರೀಮಂತ ಸಂಸ್ಕೃತಿ ಯ ಪ್ರತೀಕವಾದ ಈ ಜಾನಪದ ವಿಷಯಕ್ಕೆ ಎಲ್ಲಿಲ್ಲದ ಕೀರ್ತಿ ದೊರಕಿದ್ದು ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಇದನ್ನು ಕಟ್ಟಿ ಬೆಳೆಸಿದ ಕೀರ್ತಿ ಜವರೇಗೌಡ, ಹಾ.ಮಾ.ನಾಯಕ್ ಅವರಿಗೆ ಸಲ್ಲುತ್ತದೆ. ನನಗೆ ಎಲ್ಲಿಲ್ಲದ ಆಸಕ್ತಿ ಈ ಜಾನಪದದ ಮೇಲೆ ಇದೆ ಎಂಬುದಕ್ಕೆ ನಾನು ಸ್ನಾತಕೋತ್ತರ ಪದವಿಯಲ್ಲಿ ಈ ವಿಷಯ ತೆಗೆದುಕೊಳ್ಳಲು ಮಾಡಿದ ದುಸ್ಸಾಸವೇ ಉದಾಹರಣೆ ದೇಶದ ಮೊಟ್ಟ ಮೊದಲ ಜಾನಪದ ವಿಶ್ವ ವಿದ್ಯಾನಿಲಯ ಸ್ಥಾಪಿಸಿದ ಕೀರ್ತಿ ಕರುನಾಡಿನ ಸಂದುತ್ತದೆ.ವಿದೇಶಿ ವಿದ್ವಾಂಸರ ಅಧ್ಯಯನಕ್ಕೆ ಕರೆತರುವಷ್ಟು ಶ್ರೀಮಂತ ವಿಷಯ ಸಂಸ್ಕೃತಿ ಇದಾಗಿದೆ ಪಾಶ್ಚಾತ್ಯರ ಬರವಣಿಗೆ ನೋಡಿದರೆ ಸಾಕು ಇದರ ಮಹತ್ವ ತಿಳಿಯುತ್ತದೆ ಎಂದರು.

ಇತ್ತೀಚಿಗೆ ವಿಶ್ವ ವಿದ್ಯಾನಿಲಯದಲ್ಲಿ ಎರಡು ಸೆಮಿಸ್ಟರ್ ನಲ್ಲಿ ಬೇರೆ ವಿಷಯ ಅಧ್ಯಯನ ಮಾಡುವ ಕೆಲಸ ಮಾಡಿರುವುದರಿಂದ ಇಂತಹ ವಿಷಯಗಳ ಬಗ್ಗೆ ತಿಳಿಯಲು ಸಾಧ್ಯ ಆದರೆ ಇದು ವರೆಗೂ ಸಮ್ಮೇಳನಗಳು ನಡೆಯದೆ ಇರುವುದು ವಿಷಾದನೀಯ ಎಂದು ತಿಳಿಸಿದರು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಡಿ. ಬಿ.ನಾಯಕ್ ಜಾನಪದ ವಿಶ್ವ ವಿದ್ಯಾನಿಲಯಗಳು ಜಂಗಮ ವಿವಿ ಯಾಗಬೇಕಿವೆ ಈ ದೃಷ್ಟಿಯಿಂದ ನಮ್ಮ ವಿವಿಯು ಗ್ರಾಮ ಚರಿತ್ರೆ ಎಂಬ 59 ಸಾವಿರ ಹಳ್ಳಿಗಳ ಅಧ್ಯಯನ ನಡೆಸಿ ಸಂಪುಟಗಳ ಹೊರ ತರುವ ಮಹತ್ವದ ಕೆಲಸ ಮಾಡಿದೆ ಇದರ ಜೊತೆ 13 ಜಿಲ್ಲೆಗಳ ಅಧ್ಯಯನ ನಡೆಸಿ ಜಾನಪದದ ಮಾಹಿತಿ ಕಲೆ ಹಾಕಿದ್ದೇವೆ. ಇಂದು ಇರುವ ನಾವೆಲ್ಲರೂ ಹಿರಿಯರು ಪರಿಚಯಿಸಿರುವ ಈ ಜಾನಪದವನ್ನು ಉಳಿಸಿ ಬೆಳೆಸುವ ಕೆಲಸ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಆದರೆ ಅದನ್ನು ಕುಶಾಲ ಬರಗೂರ

ಮಾಡಿದ್ದಾರೆ ಇದೊಂದು ಉತ್ತಮ ಕೃತಿಯಾಗಿದೆ ಎಂದು ಪ್ರಶಂಸಿದರು.

ಕನ್ನಡ ವಿಶ್ವಕೋಶ ಕಾರ್ಯನಿರ್ವಾಹಕ ಸಂಪಾದಕ ಡಾ. ಹಾ.ತಿ.ಕೃಷ್ಣೇಗೌಡ, ಮೈಸೂರು ವಿವಿಯ ಪಿ ಎಂ ಇ ಬಿ ನಿರ್ದೇಶಕ ಪ್ರೊ. ಯಶವಂತ್ ಡೋಂಗ್ರೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ ನೀಲಗಿರಿ ತಳವಾರ, ಹಾಸನದ ಜಾನಪದ ಕಲಾವಿದರಾದ ಉಚ್ಚಮ್ಮ ಚೆನ್ನಯ್ಯ, ದೇವಮ್ಮ,ತೋಪಮ್ಮ ಇದ್ದರು.

## ‘ಸಹಕಾರ ಕ್ಷೇತ್ರಕ್ಕೂ ಆದ್ಯತೆ ಸಿಗಲಿ’



ವಿಚಾರ ಸಂಕಿರಣದಲ್ಲಿ ಲೇಖಕ ಎಚ್.ಆರ್.ಕೃಷ್ಣಯ್ಯಗೌಡ, ಕುಸುಮಾ ದಂಪತಿಯನ್ನು ಅಭಿನಂದಿಸಲಾಯಿತು

ಇಂದಿನ ಯುವ ಪೀಳಿಗೆ ಗ್ರಾಮೀಣಾಭಿವೃದ್ಧಿಗೆ ಮಾತ್ರವಲ್ಲದೆ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಕಡೆಗೂ ಗಮನ ಹರಿಸಬೇಕು ಎಂದು ಮೈಸೂರು ವಿ.ವಿಯ ವಿಶ್ರಾಂತ ಕುಲಪತಿ ಡಾ.ಎಂ.ಮಾದಯ್ಯ ಹೇಳಿದರು.

ಮೈಸೂರು ವಿ.ವಿ ಪ್ರಾಚ್ಯವಿದ್ಯಾ ಸಂಶೋಧನಾಲಯ, ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಶೋಧನಾ ಪರಿಷತ್ ಜಿಲ್ಲಾ ಘಟಕದ ವತಿಯಿಂದ ‘ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಕರ್ನಾಟಕದ ಆರ್ಥಿಕ ಚಿಂತಕರು ವಿಚಾರಸಂಕಿರಣ ಮಾಲಿಕೆ 1ರಲ್ಲಿ’ ರಾಜ್ಯಮಟ್ಟದ ವಿಚಾರ ಸಂಕಿರಣ ಹಾಗೂ ಲೇಖಕ ಎಚ್.ಆರ್. ಕೃಷ್ಣಯ್ಯ ಗೌಡ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣಾಭಿವೃದ್ಧಿ, ಸಹಕಾರ ಕ್ಷೇತ್ರ ದೇಶದ ಆರ್ಥಿಕಾಭಿವೃದ್ಧಿಯ ಹಾದಿ ಇದ್ದಂತೆ. ಬಿ.ಎ, ಎಂ.ಎ ಪದವಿಯಲ್ಲಿ ಸಹಕಾರ, ಗ್ರಾಮೀಣಾಭಿವೃದ್ಧಿ ವಿಷಯ ಗಳನ್ನು ಪಠ್ಯವಾಗಿ ಅಳವಡಿಸಿರುವುದು ಸಂತಸದ ಸಂಗತಿ. ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ವಿಷಯಗಳನ್ನು ಅಧ್ಯಯನ ಮಾಡುವ ಮೂಲಕ ಆಯಾ ಕ್ಷೇತ್ರದ ಅಭಿವೃದ್ಧಿಗೆ ದುಡಿಯಬೇಕು ಎಂದರು.

ಮೈಸೂರು ವಿ.ವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ‘ಕೌಟಿಲ್ಯ ರಚಿಸಿದ ಅರ್ಥಶಾಸ್ತ್ರ ಗ್ರಂಥದ ಮೂಲ ಪ್ರತಿ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಲಭ್ಯವಿದೆ. ಡಾ.ಶ್ಯಾಮಾಶಾಸ್ತ್ರಿಗಳು ಈ ಗ್ರಂಥವನ್ನು ಸಂರಕ್ಷಿಸಿ, ನಂತರ ಸಂಸ್ಕೃತದಲ್ಲಿ ಪ್ರಟಕವಾಗುವಂತೆ ಮಾಡಿದ್ದರು. ಎಂದರು.

ತುಮಕೂರು ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಂ. ಎಸ್.ನರಸಿಂಹನ್ ಅವರು

**ಪುಟ – 3**

## ಪೂರ್ಣತೆ ಕಡೆಗೆ ನಮ್ಮ ಬದುಕು ಸಾಗಬೇಕು : ಸುಚೇಂದ್ರ ಪ್ರಸಾದ್



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಆಯೋಜಿಸಿದ್ದ ‘ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ವಿದ್ಯಾರ್ಥಿ ಸಂಸ್ಕೃತಿ ಚಳವಳಿ’ ಸಮಾರೋಪ ಸಮಾರಂಭದಲ್ಲಿ ನಟ ಸುಚೇಂದ್ರ ಪ್ರಸಾದ್ ಮಾತನಾಡಿದರು

ಪೂರ್ಣತೆ ಕಡೆಗೆ ನಮ್ಮ ಬದುಕು ಸಾಗಬೇಕು ವಿಚಾರ ವಿನಿಮಯಕ್ಕೆ ಇಂತಹ ವೇದಿಕೆಗಳು ಅವಕಾಶ ಕಲ್ಪಿಸಿ ಕೊಡಬೇಕು ಎಂದು ರಂಗ ಕರ್ಮಿ ಸುಚೇಂದ್ರ ಪ್ರಸಾದ್ ಅಭಿಪ್ರಾಯ ಪಟ್ಟರು.

ಮಾನಸ ಗಂಗೋತ್ರಿಯ ಮುಕ್ತ ವಿಶ್ವವಿದ್ಯಾಲಯ ಆವರಣದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಹಾಗೂ ಡಾ.ಬಿವಿ ಕಾರಂತ ಅಧ್ಯಯನ ಪೀಠ ಮತ್ತು ವಿದ್ಯಾರ್ಥಿ ಪಥ ಸಹಯೋಗದಲ್ಲಿ ಎರಡು ದಿನಗಳ ಕಾಲ ನೆಡೆದ ರಾಷ್ಟ್ರ ಪುನರ್ ನಿರ್ಮಾಣಕ್ಕೆ ವಿದ್ಯಾರ್ಥಿ ಸಂಸ್ಕೃತಿ ಚಳುವಳಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಭರತ ಖಂಡದಲ್ಲಿ ನಾವೇ ಸಾಕಿದ ವಿಷ ಸರ್ಪಗಳು ಒಂದು ನಮ್ಮ ಮೇಲೆ ವಿಷ ಕಾರುತ್ತಿವೆ. ನಾವಿಂದು ಕೇವಲ ಕೈ ಮುಂದೆ ಚಾಚಿ ಪ್ರತಿಜ್ಞೆ ಮಾಡಿದರೆ ಸಾಲದು ಮಾಡಿದ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರಬೇಕು. ಆದರೆ ಇಂದು ಅದು ಆಗುತ್ತಿಲ್ಲಾ ಎಂದರು.

ಪರಿಷತ್ ಎಂದರೆ ಪೂರ್ವ ಷರತ್ತುಗಳು ಇಲ್ಲದೆ ಇರುವ ಒಂದು ಸಂಘಟನೆ ಆದರೆ ಬದುಕಿನ ಗುರಿ ತಲುಪಲು ಷರತ್ತುಗಳು ಬೇಕೆ ಬೇಕು ಅಲ್ಲದೆ ವಿದ್ಯಾರ್ಥಿ ಎಂದರೆ ವಿದ್ಯೆಯನ್ನು ಅರ್ಚಿಸುವವನು ಅಸ್ವಾದಿಸುವವನು ಎಂದರ್ಥ ಆದರೆ ಇಂದು ನಾವೆಲ್ಲ ಅದನ್ನು ಮಾಡುತ್ತಿಲ್ಲ ಕೈಗೆಟುಕುವ ಬೆಲೆಯಲ್ಲಿ ಶಿಕ್ಷಣ ವನ್ನೂ ಪಡೆದು ಅಲ್ಲಿಗೆ ನಮ್ಮ ವಿಧ್ಯಾಭ್ಯಾಸ ಮುಗಿಯಿತು ಎಂದು ಬಿಡುತ್ತೇವೆ ಆದರೆ ಅದಾಗಬರದು ಸದಾ ನಾವು ಬದುಕಿನ ನಡೆಯು ಧ್ವನಿ ಪೂರ್ಣ,ರಸ ಪೂರ್ಣವಾಗಿ ಎಲ್ಲವನ್ನೂ ಸವಿಯುವ ಜ್ಞಾನಿಗಳಗಬೇಕು ಕ್ರಿಯಾ ಶೀಲರಾಗಬೇಕು.ಒಮ್ಮೆ ಸ್ವಾಮಿ ವಿವೇಕ ನಂದರು ಕೇಳುತ್ತಾರೆ ನಿಮಗೆ ಸ್ವಾತಂತ್ರ ಕೊಡಿಸುತ್ತೇನೆ ಆದರೆ ಅದನ್ನು ನಿಭಾಯಿಸುತ್ತೀರಾ ಎಂದು ಪ್ರಶ್ನಿಸುವ ಪ್ರಶ್ನೆಗೆ ನಾವಿಂದು ಉತ್ತರಿಸುವಲ್ಲಿ ವಿಫಲರಾಗಿದ್ದೇವೆ ಅನಿಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಎಬಿವಿಪಿ ಉದ್ದೇಶ ಒಂದೇ ಕತ್ತಲಿನಿಂದ ಬೆಳಕಿನೆಡೆಗೆ ತರುವುದು ಅದರ ಧೃಡ ಸಂಕಲ್ಪ ಅದನ್ನು ಮಾಡುತ್ತಲೇ ಬಂದಿದೆ ಪರಿಷತ್ ಒಳ್ಳೊಳ್ಳೆ ಕೆಲಸಗಳನ್ನು ನಿಜ ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕು ಅಗ ಮಾತ್ರ ಒಂದು ಉತ್ತಮ ಸೇವೆ ಸಲ್ಲಿಸಲು ಸಾಧ್ಯ ಇಂದು ಭರತ ಖಂಡದ ರಕ್ಷಣೆಗೆ ನಿಲ್ಲುವ ಕಿಚ್ಚಿನ ಯುವ ಕಿಡಿಗಳು ನೀವು ಒಂದು ಸಿಡಿದೇಳುವ ಸಮಯ ಬಂದಿದೆ ಸಿಡಿದೇಳಿ ಭಾರತವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರದು ಎಂದು ಹೇಳಿದರು.

**ಪುಟ – 3**

# ಸಂಪಾದಕೀಯ

## ಶಿಕ್ಷಣದ ಗುಣಮಟ್ಟ ಸುಧಾರಣೆ ಆಗಬೇಕು

ನಮ್ಮ ದೇಶದಲ್ಲಿ ಪ್ರಸ್ತುತ ಲಭ್ಯವಿರುವ ಶಿಕ್ಷಣದ ಗುಣಮಟ್ಟದ ಕುರಿತಾಗಿ ಸಾಕಷ್ಟು ಚರ್ಚೆಗಳು ಮತ್ತು ಪ್ರಯೋಗಗಳು ಬಹಳ ಕಾಲದಿಂದ ನಡೆಯುತ್ತಲೇ ಇದ್ದರೂ, ನಿರೀಕ್ಷಿತ ಫಲಿತಾಂಶ ಕಂಡುಬರುತ್ತಿಲ್ಲ ಎಂಬುದು ಕಹಿವಾಸ್ತವ. 'ಶಿಕ್ಷಣದ ಹಕ್ಕು' ಎಂಬ ಹಣೆಪಟ್ಟಿಯಡಿಯಲ್ಲಿ ಹೆಚ್ಚೆಚ್ಚು ವಿದ್ಯಾರ್ಥಿಗಳು ಶಾಲೆಗಳಲ್ಲಿ ದಾಖಲಾಗುತ್ತಿರುವುದು ಹಾಗೂ ಶಾಲೆಯಿಂದ ಹೊರಗುಳಿಯುತ್ತಿರುವವರ ಸಂಖ್ಯೆ ತಗ್ಗಿರುವುದು ನಿಜವಾದರೂ, ಇಂಥ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಗಣಿತದ ಸರಳ ಲೆಕ್ಕಗಳನ್ನೂ ಮಾಡಲು ಬರುತ್ತಿಲ್ಲ ಎಂಬ ಸಂಗತಿ ಅನಾವರಣಗೊಂಡಿದೆ. ಸರ್ಕಾರೇತರ ಸಂಸ್ಥೆಯೊಂದು ಈ ಸಂಬಂಧ ಬಿಡುಗಡೆ ಮಾಡಿರುವ ವರದಿಯೇ ತಿಳಿಸುವಂತೆ, 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಇಂಥ ಶೇ. 56ರಷ್ಟು ವಿದ್ಯಾರ್ಥಿಗಳಿಗೆ ಮೂರಂಕಿಯ ಸಂಖ್ಯೆಯೊಂದನ್ನು ಒಂದಂಕಿಯಿಂದ ಭಾಗಿಸಲು ಬರುವುದಿಲ್ಲ, 5ನೇ ತರಗತಿಯಲ್ಲಿರುವ ಶೇ. 72ರಷ್ಟು ವಿದ್ಯಾರ್ಥಿಗಳಿಗೆ ಭಾಗಾಕಾರವೇ ಬರುವುದಿಲ್ಲ ಮತ್ತು 3ನೇ ತರಗತಿಯಲ್ಲಿರುವ ಶೇ. 70ರಷ್ಟು ವಿದ್ಯಾರ್ಥಿಗಳಿಗೆ ಕಳೆಯುವ ಲೆಕ್ಕ ಅಪರಿಚಿತವಂತೆ.

ಮೇಲ್ವರ್ಗಗಳಿಗೆ ಸೇರಿದವರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಶೇ. 10ರ ಮೀಸಲಾತಿಯ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ, ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 25ರಷ್ಟು ಸೀಟು ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಆದೇಶಿಸಿದೆ. ಈ ಉಪಕ್ರಮದಿಂದಾಗಿ 900 ವಿಶ್ವವಿದ್ಯಾಲಯಗಳು ಮತ್ತು 40,000 ಕಾಲೇಜುಗಳಲ್ಲಿ ಈ ಮೀಸಲಾತಿಯ ಅನ್ವಯ ಆಗಲಿಕ್ಕಿದೆ. ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಸೇರಿದ ಫಲಾನುಭವಿಗಳಿಗೆ ಸೀಟುಹಂಚಿಕೆಯಲ್ಲಿ ತೊಡಕು ಅಥವಾ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಈ ನಿರ್ಧಾರ ಕೈಗೊಂಡಿರುವುದು ಸೂಕ್ತವೇ. ಆದರೆ ಸೀಟು ಹೆಚ್ಚಳದಿಂದ ಮಾತ್ರವೇ ಸಮಸ್ಯೆ ಪರಿಹಾರವಾಗುವುದಿಲ್ಲ ಎಂಬ ಸತ್ಯವನ್ನು ಸಂಬಂಧಪಟ್ಟವರು ಮನಗಾಣಬೇಕಾಗಿದೆ. ಸೀಟು ಹೆಚ್ಚಳಕ್ಕೆ ತಕ್ಕಂತೆ ಮೂಲಸೌಲಭ್ಯಗಳನ್ನು ಕಲ್ಪಿಸುವಿಕೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕಾತಿ, ಶಿಕ್ಷಣದ ಗುಣಮಟ್ಟ ಸುಧಾರಣೆ ಮೊದಲಾದ ಬಾಬತ್ತುಗಳ ಕಡೆಗೂ ಆದ್ಯಗಮನ ನೀಡಬೇಕಾಗುತ್ತದೆ ಎಂಬುದಿಲ್ಲಿ ಮುಖ್ಯ. ಹೊಸ ಶಿಕ್ಷಣ ನೀತಿ ರೂಪಿಸುವ ನಿಟ್ಟಿನಲ್ಲಿ ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷ ಕೆ. ಕಸ್ತೂರಿ ರಂಗನ್ ಸಮಿತಿ ನೀಡಿರುವ ವರದಿ ಈಗಾಗಲೇ ಕೇಂದ್ರ ಸರ್ಕಾರದ ಕೈಸೇರಿದೆ. ಶಾಲಾಮಕ್ಕಳ ಪಠ್ಯದ ಚೀಲ, ಹೋಂವರ್ಕ್ ಸೇರಿದಂತೆ ಶಿಕ್ಷಣದ ಹೆಸರಿನಲ್ಲಿ ಮಕ್ಕಳ ಮೇಲೆ ಹೇರಲಾಗುತ್ತಿರುವ ಅನಗತ್ಯ ಮತ್ತು ಅತಿರೇಕದ ಹೊರೆಯನ್ನು ತಗ್ಗಿಸಬೇಕಾದ ಅಗತ್ಯದ ಕುರಿತು ಈ ವರದಿ ಶಿಫಾರಸು ಮಾಡಿದೆ.ಶಿಕ್ಷಣಕ್ಷೇತ್ರವು ಒಂದು 'ಅನುತ್ಪಾದಕ ವಲಯ' ಎಂದು ಅನಾದರ ತೋರದೆ, ಅಗತ್ಯವಿರುವ ಎಲ್ಲ ಸಿಬ್ಬಂದಿ–ಸಾಧನ–ಸಲಕರಣೆ–ಸಂಪನ್ಮೂಲಗಳನ್ನು ಒದಗಿಸುವುದು, ಅವುಗಳ ಕಾರ್ಯಾಚರಣೆ ಸಮರ್ಪಕವಾಗಿ ನಡೆಯುತ್ತಿದೆಯೇ ಎಂಬುದರ ಕುರಿತು ಹದ್ದಿನಕಣ್ಣು ಇರಿಸುವುದು ಹಾಗೂ ಕಾಲಾನುಕಾಲಕ್ಕೆ ಮೌಲ್ಯಮಾಪನ ಮಾಡುವುದು ಆಳುಗ ವ್ಯವಸ್ಥೆಯ ಆದ್ಯಕರ್ತವ್ಯವಾಗಬೇಕು. ಇಲ್ಲವಾದಲ್ಲಿ, ಹೇರಳ ಹಣ ಖರ್ಚುಮಾಡಿಯೂ ದಕ್ಕುವ ಫಲಿತಾಂಶ ಕಳಪೆಯಾಗಿರುತ್ತದೆ.

**ಸಂಪಾದಕರು**

ಪ್ರೊ.ಪುಟ್ಟಸ್ವಾಮಿ, ಪ್ರೊ. ಮಹೇಶ್ ಚಂದ್ರ ಗುರು, ಡಾ.ಸಪ್ನಾ, ಡಾ.ಮಮತಾ

**ವಿದ್ಯಾರ್ಥಿ ಸಂಪಾದಕ ಮತ್ತು ಪುಟ ವಿನ್ಯಾಸ**

ಮನೋಜ್ ಕುಮಾರ್ ಎನ್. ಬಸರೀಕಟ್ಟೆ

**ಸುದ್ದಿ ಸಂಪಾದಕರು** : ಆರ್.ವೆಂಕಟಚಲಪತಿ

**ಉಪ ಸಂಪಾದಕರು :**

ಕನ್ಯಾ ಕುಮಾರಿ, ಸುನೀಲ ಗದೆಪ್ಪಗೋಳ,

ಮೇಘನಾ ಎಂ, ಶಾಂತರಾಜು

# ವ್ಯಾಲೆಂಟನ್ಸ್ ಡೇ ವಿಶೇಷತೆ ಏನು??



ಸಾಂದರ್ಭಿಕ ಚಿತ್ರ

ಪ್ರೇಮಿಗಳ ದಿನ. ಎಲ್ಲಿ ನೋಡಿದರೂ ಕಲರ್ ಫುಲ್ ಬಟ್ಟೆ ಹಾಕ್ಕೊಂಡು, ಬೈಕ್‌ನಲ್ಲಿ, ಕಾರ್‌ನಲ್ಲಿ, ಬಸ್ಸಿನಲ್ಲಿ, ಪ್ರೇಮಿಗಳನ್ನು ನೋಡೋಕ್ಕೇ ಕಣ್ಣು ಕಾಯ್ತಾಇತ್ತು.

ನನ್ನ ಕೆಲವು ಸ್ನೇಹಿತರ ಪ್ರಕಾರ ಲವ್ ಮಾಡೋರಿಗೆ ಪ್ರತಿದಿನ ಪ್ರೇಮಿಗಳ ದಿನವೇ ಅಂತೆ!!!!!! ಆದರೂ ಫೆಬ್ರವರಿ ಬಂದ್ರೆ 17 ವರ್ಷದಿಂದ ಹಿಡಿದು 70 ವರ್ಷದೊರಿಗು ಮೈಪುಳಕ ಆಗುತ್ತೆ,,,,, Gift exchange, love propose, cake cutting, outing, Celebrations ಪ್ರೇಮಿಗಳ ದಿನ ಅಂದ್ರೇ ಬರೀ ಇಷ್ಟೇ ಅಲ್ಲ. ಇವಾಗ್ ನಾನು ಹೇಳೊಕ್ಕೇ ಹೊರಟಿರೋ ವಿಷಯ ಏನು ಅಂದ್ರೇ ಈ ಪ್ರೇಮಿಗಳ ದಿನ ಯಾಕೆ ಆಚರಿಸತ್ತಾರೆ ಅಂತ ತಿಳ್ಕೊಂಡು ಆಚರಣೆ ಮಾಡೋಣ ಅಂತ.

ಕ್ರಿ.ಶ.268 ರಿಂದ 270ರವರೆಗೆ 2ನೇ ಕ್ಲಾಡಿಯನ್ ಅನ್ನೋನು ರೋಮನ್ ಸಾಮ್ರಾಜ್ಯ ಆಳಿದ್ದ. ಸಕತ್ ಸ್ಟ್ರಾಂಗ್ ಆಗಿ ಇದ್ದ ಇವನಿಗೆ ಮೃದು ಹೃದಯ ಇರಲಿಲ್ಲ. ಯಾವಾಗ್ಲು ಯುದ್ಧ ಮಾಡ್ಬೇಕು ಸಾಮ್ರಾಜ್ಯ ಗೆಲ್ಲಬೇಕು. ಹಾಗಾಗಿ ಅವನ ಬದುಕಲ್ಲಿ ಪ್ರೀತಿ,ಪ್ರೇಮ ಅವಕ್ಕೆಲ್ಲ ಜಾಗ ಇರಲಿಲ್ಲ. ಅವನ ಸೈನಿಕರು ಕೂಡ ಯಾವ ಏಮೋಷನ್ಸ್‌ಗೂ ಒಳಗ್‌ಬಾರ್ದು ಅತಿದ್ನಂತೆ. ಇವನ ಸೈನಿಕರು ಯಾರು ಪ್ರೀತಿ, ಮದುವೆ ಬಂಧನಕ್ಕೆ ಒಳಗಾಬಾರ್ದು ಅಂತ ಕಟ್ಟಪ್ಪಣೆ ಮಾಡಿದ್ದ. ಏಕೆಂದರೆ ಅವನ ಪ್ರಕಾರ ಯೋಧ ಏಮೋಷಸ್ಸ್ ಸೆಂಟಿಮೆಟ್ಸ್ ಒಳಗಾದರೆ ಯುದ್ಧ ಗೆಲ್ಲೋಕ್ಕೆ ಆಗೋಲ್ಲ ಅನ್ನೋದು ಅವನ ಸಿದ್ದಾಂತ ಆಗಿತ್ತು. ಪಾಪ ಸೈನಿಕರ ಪಾಡು ಹೇಗ್ ಇರ್ಬೇಡ??





ವ್ಯಾಲೆಂಟನ್

ಯಾವುದೇ ರಾಜ ಏಷ್ಟೇ ಕಾನೂನು ಮಾಡುದ್ರು ಪ್ರೀತಿ ಅನ್ನೋದು ಸ್ವಾಭಾವಿಕ. ಕಾನೂನು ಕಟ್ಟಲೆ, ಜಾಗ,ನೆಲ, ನೋಡಿ ಪ್ರಿತಿ ಹುಟ್ಟೊಲ್ಲ ಅನ್ನೊ ವಿಷ್ಯ ಕ್ಲಾಡಿಯನ್‌ಗೆ ಗೊತ್ತಿಲ್ಲ. ಹಾಗೆ ಅವನ ಸೈನಿಕರಿಗೂ ಪ್ರೀತಿ ಹುಟ್ಟುತ್ತಿತ್ತು. ಆದರೆ ಈರೀತಿ ಬಿಗಿ ಕಾನೂನಿನಲ್ಲಿ ಮದುವೆ ಆಗೋದು ಅಸಾಧ್ಯವೇ ಸರಿ. ಈಗ ಬಂದ ನೋಡಿ ನಮ್ಮ ಹಿರೋ,

"ಬಿಷಪ್ ವ್ಯಾಲೆಂಟಿನ್" ಇವನು 2ಕ್ಲಾಡಿಯನ್‌ನ್ನ ನೀತಿ, ಅವನ ಯೋಚ್ನಗಳನ್ನು ಖಂಡಸಿ ಅನೇಕ ಸೈನಿಕರಿಗೆ ರಹಸ್ಯವಾಗಿ ಮದುವೆ ಮಾಡಿಸಿ ಅವರ ಪಾಲಿಗೆ ದೇವರಾದ್ದ. ಪ್ರೀತಿಸಿದವರ ಜೊತೆ ಬದುಕುವುದು ಅವರ ಹಕ್ಕು ಪ್ರಕೃತಿ ಸಹಜ ಕ್ರೀಯೆ. ಕಾನೂನು ಏನೂ ಮಾಡಲು ಆಗಲ್ಲ ಅಂತ ಅವನ ನಿಲುವಾಗಿತ್ತು. ಆದರೆ ಈ ವಿಷ್ಯ 2ಕ್ಲಾಡಿಯನ್‌ಗೆ ತಿಳಿಯಿತು. ಕೋಪ ಉದ್ವೇಗ ಒಳಗೊಂಡು ಕ್ರಿ.ಶ.269ರ ಫೆಬ್ರವರಿ 14ರಂದು ವ್ಯಾಲೆಂಟನ್‌ನ್ನು ಗಲ್ಲಿಗೇರಿಸುತ್ತಾನೆ. ಉದಾರ ಹೃದಯಿಯಾಗಿದ್ದ ವ್ಯಾಲೆಂಟನ್ ಸಾಯಕ್ಕೂ ಮುಂಚೆ ಒಂದು ಪತ್ರದಲ್ಲಿ ನಿಮ್ಮ "ವ್ಯಾಲೆಂಟನ್" ಅಂತ ಬರೆದಿರುತ್ತಾನೆ. ಅವನು ಮದುವೆ ಮಾಡಿಸಿದ ಹಲವಾರು ಜೋಡಿಗಳು ಆ ದಿನವನ್ನು ಪ್ರೇಮಕ್ಕೇ ಮಿಸಲಿಡಬೇಕು ಅಂತ ತೀರ್ಮಾನ ಮಾಡಿ ಫೆಬ್ರವರಿ 14 ರಂದು ವ್ಯಾಲೆಂಟನ್ ಡೇ ಶುದ್ದ ಪ್ರೇಮಿಗಳ ದಿನವಾಗಿ ಆಚರಣೆ ಮಾಡಲಾಯಿತು. ಕ್ಯಾಥೊಲಿಕ್ ಚರ್ಚ್‌ಗಳು ಸಹ ವ್ಯಾಲೆಂಟನ್ ಡೇ ಆಚರಣೆ ಮಾಡ್ತಾರೆ. ಇದು ನಮ್ಮ ವ್ಯಾಲೆಂಟನ್ ಹಿರೋ ಕಥೆ. ತಾನು ಸತ್ತು, ಪ್ರೇಮಿಗಳು ಸುಖವಾಗಿರಲಿ ಎಂದು ಬಯಸಿದವನಿಗೆ ಒಂದು ದಿನವಾದರು ನೆನೆಯೋಣ.

ಆದ್ದರಿಂದ ಪ್ರೇಮಿಗಳೆ ಬರಿ ರೋಸ್ ಕೋಟ್ಟು propose ಮಾಡುವುದರ ಜೊತೆಗೆ ಈದಿನವನ್ನು ಯಾಕೆ ಆಚರಿಸುತ್ತಾರೆ ಅಂತ ತಿಳ್ಕೊಳೋಣ. ನಮ್ಮಲ್ಲಿ ಹಲವರಿಗೆ ಈ ವಿಷ್ಯ ಗೊತ್ತಿರಬಹುದು, ಗೊತ್ತಿಲ್ಲದೆ ಇದ್ರೆ ತಿಳ್ಕೊಂಡು ಆಚರಿಸೋಣ ಆಚರಿಸೋಣ.

ಪ್ರೀತಿ ಎನ್ನುವುದು ಭಾವನೆ ಮಾತ್ರವಲ್ಲ.ಒಂದು ಜೀವನ.ಈ ಯಾಂತ್ರಿಕ ಬದುಕಿನಲ್ಲಿ ಮನುಷ್ಯ ಲವಲವಿಕೆಯಿಂದ ಜೀವಿಸಲು ಪ್ರೀತಿ ಔಷಧ. ಸರಿಯಾದ ರೋಗಕ್ಕೆ ಸರಿಯಾದ ಮದ್ದು ನೀಡಬೇಕು. ಹಾಗೆಯೆ ಯಾರ ಪ್ರೀತಿ ಯಾರಿಗೆ ಹಿತವೊ ಆಗಲೇ ಪ್ರೀತಿಗೆ ಸಿಗುವುದು ಅರ್ಥ.

**– ಬಿ. ಅಕ್ಷತಾ ಕುಮಾರಿ,**
**ಪತ್ರಿಕೋದ್ಯಮ ವಿದ್ಯಾರ್ಥಿನಿ,**

## ವಿದ್ಯಾರ್ಥಿ ಪತ್ರ

# ಗಂಗೋತ್ರಿ ಬಳಿ ಬೇಕು ಬಸ್ ನಿಲ್ದಾಣ.

ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಪ್ರದೇಶವೆನಿಸಿಕೊಂಡ ಗದ್ದಿಗೆ ರಸ್ತೆಯಲ್ಲಿರುವ ಮಾನಸ ಗಂಗೊತ್ರೀ ಬಳಿ ಬಸ್ ನಿಲ್ದಾಣ ನಿರ್ಮಾಣ ಕಾರ್ಯಕ್ಕೆ ಇನ್ನೂ ಸ್ಥಳಿಯ ಆಡಳಿತ ಅಧಿಕಾರಿಗಳಿಗೆ ಮನಸ್ಸು ಬಂದಂತಿಲ್ಲ. ಜೋಡಿ ರಸ್ತೆ ಹಾಗೂ ಫುಟ್ ಪಾತ್‌ಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಬಹುಶಃ ಬಸ್ ನಿಲ್ದಾಣದ ಕಾಮಗಾರಿಯನ್ನು ಮರೆತು ಬಿಟ್ಟರೇನೂ ? ಪ್ರತಿಷ್ಠಿತ ಬಡಾವಣೆಗಳ ಗೋಳೆ ಹೀಗಾದರೆ ಬಡ ಬಡಾವಣೆಗಳ ಸಮಸ್ಯೆಗಳನ್ನು ಕೇಳೋರು ಯಾರು? ಬೇಗ ನಿಲ್ದಾಣ ನಿರ್ಮಿಸಿ ವಿದ್ಯಾರ್ಥಿಗಳ ಗೋಳು ತಪ್ಪಿಸಿ



– ಶಾಂತರಾಜು
ಪತ್ರಿಕೋದ್ಯಮ ವಿದ್ಯಾರ್ಥಿ

## ಒಂಚೂರು



**ಭಾರತ ದೇಶದ ಅತೀ ದೊಡ್ಡ ಅಣೆಕಟ್ಟು**
**ಉತ್ತರಾಖಂಡ್‌ನ ತೆಹ್ರಿ ಅಣೆಕಟ್ಟು**

## ಚಿತ್ರ'ಪಟ'



**ಚಿತ್ರ : ಎ.ಎಸ್ ಅನಿಲ್**
ದ್ವಿತೀಯ ಪತ್ರಿಕೋದ್ಯಮ ವಿದ್ಯಾರ್ಥಿ

**ನಿಮ್ಮ ಲೇಖನ, ಕವಿತೆ, ನುಡಿ ಚಿತ್ರ, ಅನಿಸಿಕೆ, ಮತ್ತು ಛಾಯಾಚಿತ್ರಗಳನ್ನು ನಮಗೆ ತಲುಪಿಸಿ.**
**ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮಾನವಿಕ ಅಧ್ಯಯನ ಬ್ಲಾಕ್, ಮಾನಸಗಂಗೋತ್ರಿ.**
**dosmcj2018@gmail.com ಗೆ ಕಳುಹಿಸಿ.**

# ಚೋರಿಯಾಗಿದೆ ನನ್ನ ದಿಲ್..!



ನೀರಿನಷ್ಟೇ ನಿರ್ಮಲಳು, ಹೂವಿನಷ್ಟೇ ಕೋಮಲಳು ನೀನು. ನಿನ್ನ ನಿಷ್ಕಲ್ಮಶಯುತ ಮೊದಲ ನೋಟಕ್ಕೆ ತಕರಾರಿಲ್ಲದೆ ಸೋತೆನು. ಅರವಳಿಕೆಯಷ್ಟೇ ಮತ್ತು ಬರಿಸಿತ್ತು ನಿನ್ನ ಕಿರುಲಜ್ಜೆ. ಏಕೋ ಏನೋ ಆ ವಾರೆಗಣ್ಣಿನ ನೋಟ ನನ್ನನ್ನು ಮತ್ತೆ ಮತ್ತೆ ಕೆಣಕುತ್ತಿದೆ. ನೀನೆ ಬೇಕೆಂದು ಮನಸ್ಸು ಹಠ ಮಾಡಿದೆ. ಮೊದಲ ದಿನ ತರಗತಿಯಲ್ಲಿ ನಿನ್ನನ್ನು ಕಂಡೊಡನೆ ಮನಸ್ಸಲ್ಲಿ ಉಲ್ಲಾಸದ ಜಿಡಿಮಳೆ ಸುರಿಯಿತು. ಸ್ನೇಹಿತೆಯರ ಜೊತೆ ಮಾತನಾಡುತ್ತಾ ನಿನ್ನ ಪಾಡಿಗೆ ನೀನು ಯಾರಿಗೂ ಕೇರ್ ಮಾಡದೆ ಎಲ್ಲರೊಡನೆ ನಗುನಗುತ ಮಾತನಾಡುವ ಶೈಲಿಯ ಹಸನ್ಮುಖಿ ಸ್ವಭಾವ ಕಂಡು ಮನಸೋತೆನು. ಅಂದಿನಿಂದ ಮನಸ್ಸು ನಿನ್ನದೆ ತಿಲ್ಲಾನ ಬರೆಯುತ್ತಿದೆ. ಹೃದಯವು ನಿನ್ನ ಸನಿಹ ಬಯಸುತ್ತಾ ಉಸಿರಲ್ಲೂ ನಿನ್ನದೆ ಹೆಸರು ಹೇಳುತ್ತಿದೆ. ನಿನ್ನ ಮಾತಿಗಾಗಿಯೇ ಕಾಯುತ್ತಿದ್ದ ನನಗೊಮ್ಮೆ ಹಾಯ್ ಎಂದು ಹೇಳಿದ ಕ್ಷಣ ನಿಂತಲ್ಲೇ ಕಳೆದೋದೆ. ಆ ದಿನಪೂರ್ತಿ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಸದಾ ನಿನ್ನ ಆಗಮನವನ್ನೆ ಕಾಯುವ ನನಗೆ ಒಮ್ಮೆ ನಿನ್ನೊಡನೆ ಕ್ಯಾಂಪಸ್ ನ ರಸ್ತೆಯಲ್ಲಿ ಹೆಜ್ಜೆಗೆ ಹೆಜ್ಜೆ ಹಾಕುತ್ತಾ ನಡೆಯಬೇಕೆಂಬ ಅತೀವ ಬಯಕೆ. ಅದರಂತೇ ಜೀವನದಲ್ಲಮ್ಮೊ ಜೊತೆಯಾಗಿ ಬಾ ಗೆಳತಿ ಬಾನಾಡಿಗೊಂದು ಸವಿಮಾತು ಕಲಿಸುತ್ತಾ ಒಟ್ಟಾಗಿ ಜೀವನದ ಪಯಣದೊಂದಿಗೆ ಹೆಜ್ಜೆ ಹಾಕುತ್ತಾ ಪ್ರೇಮಕಂಪನ್ನು ಬೀರುವ. ನಾವಿಬ್ಬರು ಒಟ್ಟಾಗಿ ಸೇರಿ ಪ್ರೇಮಾಮೃತದ ಗೀತೆಯೊಂದನ್ನು ಬರೆಯೋಣ ಬಾ.

ಸದಾ ಸ್ನೇಹಿತರೊಂದಿಗೆ ಲವಲವಿಕೆಯಿಂದ ಇರುವ ನೀನು ಎಂತಹ ಸದ್ದದಯಿ ಎಂದರೆ ಅದನ್ನು ವರ್ಣಿಸಲು ನನ್ನಲ್ಲಿ ಪದಗಳೇ ಇಲ್ಲ. ಅದೆಷ್ಟೋ ಬಾರಿ ನಿನ್ನೊಡನೆ ಮನಬಿಚ್ಚಿ ಮಾತನಾಡಬೇಕು ಎಂದು ನಿನ್ನ ಮುಂದೆ ನಿಂತಾಗ ಏನೋ ಆತಂಕ ಎಡಬಿಡದೆ ಬೆನ್ನತ್ತಿ ಕಾಡುತ್ತದೆ. ನೀನು ಮಾತನಾಡಿದ ಮರುಗಳಿಗೆ ನನ್ನಲ್ಲಿ ಮಾತು ಬಾರದೆ ಹೃದಯಬಡಿತ ಹೆಚ್ಚಾಗಿ ನಾಲಿಗೆ ಹೊರಳುವುದೇ ಇಲ್ಲ. ಬಹುಶಃ ನಿನೊಂದು ಪ್ರೇಮಮಾಯಾವಿಯೊ ಆಗಿರಬಹುದು. ಪ್ರತಿ ದಿನ ಕ್ಯಾಂಪಸ್ ನಲ್ಲಿ ನಿನ್ನನ್ನು ಹುಡುಕದ ದಿನಗಳಿಲ್ಲ. ನಿನ್ನ ನೆನೆಯದ ಕ್ಷಣಗಳಿಲ್ಲ. ನೀನಗಾಗಿ ಹೃದಯದಲ್ಲಿ ರಂಗಸಜ್ಜಿಗೆಯೊಂದು ಸಜ್ಜಾಗಿದೆ ಬಾ ಗೆಳತಿ ಗೆಜ್ಜೆಯನ್ನು ಕಟ್ಟಿ ನರ್ತಿಸು. ನಿನ್ನ ಆಗಮನಕ್ಕಾಗಿ ಚಾತಕ ಪಕ್ಷಿಯಂತೆ ಕಾದು ಕುಳಿತಿರುವ ಈ ಪ್ರೇಮಿಗೆ ಒಮ್ಮೆಲೆ ಬಂದು ಪ್ರೀತಿಯ ಮಳೆಸುರಿಸು. ಕೆಲವೊಮ್ಮೆ ಮೌನ ನಿನ್ನನ್ನು ಆವರಿಸಿ ಮುಗ್ಧಳಂತೆ ಇರುತ್ತೀಯಾ ಆ ನಿನ್ನ ಮೌನವೂ ಕೂಡ ಒಂದು ಸಾಹಿತ್ಯದಂತೆ ಈ ಬರಹ ಮೂಡಲು ನನ್ನ ಹೃದಯ ಕದ್ದೊಯ್ದು ಚೋರಿ ನೀನೆ ಕಾರಣ.

–ಇಂತಿ
ಹೃದಯ ಕಳೆದುಕೊಂಡವಾ..!

**–ಚಂದ್ರಶೇಖರ್ ಬಿ.ಎನ್**
**ಪತ್ರಿಕೋದ್ಯಮ ವಿಭಾಗ**

# ಗುಳಿಕೆನ್ನೆಯ ಹುಡುಗನಿಗೆ...

ಸಾಂದರ್ಭಿಕ ಚಿತ್ರ



ಸಣ್ಣಗೆ ಬಲಗಡೆಯ ಕೆನ್ನೆಯ ಮೇಲೊಂದು ಸಣ್ಣ ಹಳ್ಳದಂತೆ, ನೀ ನಕ್ಕಾಗ ಅದೊಂದು ಸೌಂದರ್ಯವನ್ನು ತೆರೆದಿಡುವ ಗುಳಿಯೊಂದು ನಿಜವಾಗಿಯೂ ಹೀಗೆ ನನ್ನನ್ನು ಪ್ರೇಮದ ಹಳ್ಳಕ್ಕೆ ಸುಲಭವಾಗಿ ಕೆಡವಬಹುದೆಂದು ಗೊತ್ತಿರಲಿಲ್ಲ ಕಣೋ ಹುಡುಗ.

ಈಗೀಗ ನಿನ್ನದೇ ಧ್ಯಾನದಲ್ಲಿ, ನಿನ್ನ ನೆನಪುಗಳ ಹೊಳೆಯಲ್ಲಿಯ ಮಿಂದೇಳುತ್ತಿರುವೆ. ಕಾಡುವ ಕಂಗಳು, ಚಿಗುರು ಮೀಸೆ, ನಕ್ಕರೆ ಅದರಲ್ಲಿಯ ಕಳೆದು ಹೋಗುವಂತಹ ಗುಳಿ. ನೋಡು ಈಗ ನಾನು ಈ ರೀತಿಯಾಗಿ ನಿದ್ದೆಗೆಟ್ಟು, ನಿನಗೆಂದೆ ಪೆನ್ನು ಪೇಪರ್ ಹಿಡಿದು ಬರೆಯುವಂತೆ ಮಾಡಿಬಿಟ್ಟೆ ನೀನು.

ಸಂಜೆಯ ಕಾಲೇಜಿನ ಅಂಗಳದಲ್ಲಿ ಸುಮ್ಮನೆ ಪುಸ್ತಕ ಹಿಡಿದು ಓದ್ತಾ ಕೂತಿರುವಾಗ, ಅದ್ಯಾವ ಮಾಯದಲ್ಲಿ ನನ್ನ ಕಣ್ಮುಂದೆ ಕಾಣಿಸಿಕೊಂಡೆ ಹೇಳು, ಆವಾಗ್ಲೆ ನಿನ್ನ ಮೋಡಿಗೆ ಪರವಶಳಾಗಿ ಹೋದೆ. ನೀನು ಬಂದು ಅರ್ಧ ಗಂಟೆ ಕೂತು ಎದ್ದು ಹೋದೆ. ಹೋದವನು ಹಾಗೇ ಹೋಗಲಿಲ್ಲ, ನನ್ನ ಹೃದಯವನ್ನು ಕೂಡ ಜೊತೆಗೆ ಸೆಳೆದುಕೊಂಡು ಹೋದೆ.

ನಿನ್ನನ್ನೆ ಜ್ಞಾಪಿಸಿಕೊಳ್ಳುತ್ತಾ ನಡುರಾತ್ರಿಯಲ್ಲಿ ಹೀಗೆ ಎದ್ದು ಕುಳಿತಿರುವೆ ನೋಡು, ಅನಿರೀಕ್ಷಿತವಾಗಿ ಸಿಕ್ಕವನು ನೀನು ಏನೆಂದು ಹೇಳುವುದು. ಹೇಗೆ ಸಿಕ್ಕಿಯೊ ಆವತ್ತು, ಗೊತ್ತಿಲ್ಲ, ಮತ್ತೆ ನಿನ್ನ ಭೇಟಿಗೆ ಸಿಹಿಯಾದ ಕಾತುರದಿಂದ ಕಾಯುತ್ತಾ ಕುಳಿತಿರುವೆ. ಮತ್ತೆ–ಮತ್ತೆ ನಿನ್ನ ಕಣ್ನೋಟಕ್ಕೆ ಸೋಲಬೇಕೆಂಬ ಸಿಹಿಯಾದ ಆಸೆಯೊಂದಡಗಿದೆ. ಮೌನದಲ್ಲಿಯೆ ಮಾತುಗಳನ್ನು ನಿನಗೆ ಕಲಿಸಬೇಕೆಂಬ ಸಣ್ಣ ಹಂಬಲ. ಕಾಲೇಜಿನ ಅಂಗಳದ ತುಂಬೆಲ್ಲ ಬೆರಳುಗಳ ಬೆಸೆದು ಓಡಾಡಬೇಕೆಂಬ ಬಯಕೆ.

ಇದೆಲ್ಲವನ್ನೂ ನಿನ್ನ ಹತ್ತಿರ ಹೇಳಬೇಕು ಒಲವೇ,ಈ ಒಲವಿಗೆ ಒಪ್ಪಿ ನೀನು ಹೊಸದೊಂದು ಪ್ರೇಮ ಪುಸ್ತಕಕ್ಕೆ ಮುನ್ನುಡಿ ಬರೆಯಬೇಕು.

ಇದಕ್ಕೊಪ್ಪುವೆಯಾ ಹುಡುಗ, ಪ್ರೇಮದ ಭಾಷ್ಯಕ್ಕೆ ಸಾಕ್ಷಿಯಾಗೋಣ..

ಇಂತಿ ನಿನ್ನ ಅನುರಾಗಿ..

**– ರಾಜೇಶ್ವರಿ ಲಕ್ಕಣ್ಣವರ,**
**ಪತ್ರಿಕೋದ್ಯಮ ವಿದ್ಯಾರ್ಥಿನಿ**

## ಪೂರ್ಣತೆ ಕಡೆಗೆ ನಮ್ಮ ಬದುಕು ಸಾಗಬೇಕು : ಸುಚೇಂದ್ರ ಪ್ರಸಾದ್

**ಒಂದನೇ ಪುಟದಿಂದ**

ಹಿರಿಯ ರಂಗ ಕರ್ಮಿ ಪಾಪು ಶ್ರೀನಿವಾಸ್ ಮಾತನಾಡಿ ಸ್ಪರ್ಧೆ ಎಂದರೆ ಅಂತಾರ್ಯದಲ್ಲಿರುವ ಆಶೋತ್ತರಗಳಿಗೆ ಇತಿ ಮಿತಿ ಇಲ್ಲದೆ ಪ್ರತಿಭೆಯನ್ನು ಅವಲೋಕಿಸುವ ಒಂದು ಕ್ರಿಯಾಶೀಲ ಚಟುವಟಿಕೆ ಇದನ್ನು ಸಾಧನೆಯ ಹಾದಿಯಲ್ಲಿ ಇಂತಹ ಕೂಶಲ್ಯತೆ ಅಳವಡಿಸಿಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಎಸೆಸ್ಸೆಲ್ಸಿ ಯಲ್ಲಿ 624 ಅಂಕ ಪಡೆದ ಮಂಡ್ಯದ ಕೀರ್ತನ, ಪಿಎಚ್ಡಿ ಪದವೀಧರ ಪಾವಗಡದ ಡಾ.ಸಿ.ಮಂಜುನಾಥ್ ಮತ್ತು ಯುಗ ಧರ್ಮ ರಾಮಣ್ಣ ಅವರಿಗೆ ಸನ್ಮಾನಿಸಲಾಯಿತು. ನಂತರ ವಿವಿಧ ಸ್ಪರ್ಧೆಗಳು ಆಯೋಜಿಸಿದ್ದು ಅದರಲ್ಲಿ ಚಿತ್ರಕಲೆ ವಿಭಾಗದಲ್ಲಿ ರವಿವರ್ಮ ಆರ್ಟ್ಸ್ ನ ವಿದ್ಯಾರ್ಥಿ ಕಿರಣ್ ಕುಮಾರ್ ಪ್ರಥಮ ಸ್ಥಾನ, ಬೆಳಗಾವಿಯ ರಾಣಿ ಚೆನ್ನಮ್ಮ ವಿವಿ ವಿದ್ಯಾರ್ಥಿ ಓಂಕಾರಿ ಪಾಲಿ ದ್ವಿತೀಯ ಸ್ಥಾನ ಇನ್ನೂ ವಿಜಯ್ ಮೋಹನ್ ತೃತೀಯ ಸ್ಥಾನ. ಸ್ವರ ಚಿತ ಕವನ ಸ್ಪರ್ಧೆಯಲ್ಲಿ ಚಿಂತನ ಜೋಷಿ, ಪಿ ವಿ ತೇಜಸ್ವಿನಿ, ಏಕತಾ ಭಟ್ ಮತ್ತು ಮೂರ್ತಿ ರಚನೆಯಲ್ಲಿ ಸಹನಾ ಆಚಾರ್ಯ, ಆರ್.ವಿನಯ್ ಮತ್ತು ಎಂ ಕೆ ಯಶವಂತ್ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಜಾನಪದ ಕಲಾವಿದ ಯುಗ ಧರ್ಮ ರಾಮಣ್ಣ, ಎಬಿವಿಪಿ ಸಂಘಟನೆ ಕಾರ್ಯದರ್ಶಿ ಸ್ವಾಮಿ ಮರುಳ ಪುರ, ರಾಷ್ಟ್ರೀಯ ಉಪಾಧ್ಯಕ್ಷ ಬಿ ವಿ ವಸಂತ್ ಕುಮಾರ್, ರಾಜ್ಯ ಕಾರ್ಯದರ್ಶಿ ಹರ್ಷ ನಾರಾಯಣ್, ಪರಿಷತ್ ನ ಸದಸ್ಯರಾದ ನಯನ, ಮೈಸೂರು ಎಬಿವಿಪಿ ಕಾರ್ಯದರ್ಶಿ ಗೌತಮ್ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

# ಗಂಗೋತ್ರಿಯಲ್ಲಿ ಕಂಡ ರಾಮನ ಭಕ್ತರು!

ಮಂಜು ಮುಸುಕಿನಲ್ಲಿ, ಚುಮು – ಚುಮು ಚಳಿಯಲ್ಲಿ. ಪಕ್ಷಿಗಳ ಚಿಲಿಪಿಲಿ ಇಂಪಾದ ಧ್ವನಿ, ತಣ್ಣನೇ ಬೀಸುವ ಗಾಳಿಯಲ್ಲಿ ವಾಕ್ ಹೋಗುವುದೆಂದರೆ ಯಾರಿಗೆ ತಾನೇ ಇಷ್ಟ ಇಲ್ಲ ಹೇಳಿ, ಇಂತಹ ಮನಮೋಹಕ ದೃಶ್ಯ ಕಾಣುವುದು, ಎಲ್ಲೋ ದೂರದ ಬೆಟ್ಟದಲ್ಲಲ್ಲ, ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ.

ವಾಯುವಿಹಾರಿಗಳ ನೆಚ್ಚಿನ ತಾಣವಾದ ಇಲ್ಲಿ, ಪ್ರಕೃತಿ ಸೊಬಗಿಗೆ ಕೊರತೆ ಇಲ್ಲ. ಮೊನ್ನೆಯಷ್ಟೇ ಪ್ರವೇಶ ಪಡೆದಿದ್ದ ನನಗೆ ಕ್ಯಾಂಪಸ್ಸಿನ ಕುರಿತು ಅಷ್ಟೊಂದು ಗೊತ್ತಿರಲಿಲ್ಲ. ಕತೆ, ಕವಿತೆ ಬರೆಯುತ್ತಿದ್ದ ನನಗೆ ಅಂದು ಗೆಳೆಯ ಶಾಂತರಾಜು, 'ಕವಿಗಳೇ ನಾಳೆ' ಬೇಗ ವಾಕ್ ಹೋಗುವಾ' ಎಂದ. ಸರಿ ಎಂದು ತಲೆ ಅಲ್ಲಾಡಿಸಿದೆ. ಮುಂಜಾನೆ ಕೊರೆವ ಚಳಿಯಲ್ಲಿ ಹಾಸ್ಟೆಲ್‌ನಿಂದ ಕ್ಯಾಂಪಸ್ ಕಡೆ ಹೆಜ್ಜೆ ಹಾಕತೊಡಗಿದೆವು. ಕವರ್‌ಅನ್ನು ಹಿಡಿದುಕೊಂಡು 'ಗೆಳೆಯಾ, ಬನ್ನಿ ನಿಮಗೊಂದ್ ಸರ್‌ಪ್ರೈಸ್ ಇದೆ' ಎಂದ. ಏನಪ್ಪಾ ಅದು ಎನ್ನುತ್ತಾ ಕ್ಯಾಂಪಸ್ಸಿನ ಜಯಲಕ್ಷ್ಮೀ ಪ್ಯಾಲೆಸ್ ತಲುಪಿದೆ. ಆಗ ಕವರಿನಲ್ಲಿದ್ದ ಬಿಸ್ಕೆಟ್, ಪುರಿ, ಬ್ರೆಡ್‌ಅನ್ನು ತೆಗೆದು ಕೆಳ ಹಾಕಿದ. ಅದೆಲ್ಲಿಂದಲೂ ಅವಿತು ಕುಳಿತಿದ್ದ ನೂರಾರು ಅಳಿಲುಗಳು ಒಂದಕ್ಕೊಂದು ಜಿಗಿಯುತ್ತಾ ನಮ್ಮನ್ನ ಸುತ್ತುವರೆದವು. ನಿಜಕ್ಕೂ ನನಗೆ ಅಚ್ಚರಿ ಕಾದಿತ್ತು. ರಾಮ ಲಂಕಾಗೆ ಹೋಗುವಾಗ, ಸೇತುವೆ ಕಟ್ಟಲು ಅಳಿಲು ಸೇವೆ ಮಾಡಿ ಹೆಸರಾಗಿದ್ದ ಈ 'ರಾಮನ ಭಕ್ತರು', ಇಲ್ಲಿರುವನೋ ಎನಿಸಿ ಆಶ್ಚರ್ಯಚಕಿತನಾದೆ. ಹಾಗೆ ಅವನ ತುಂಟಾಟ ನಿಜಕ್ಕೂ ರೋಮಾಂಚನ, ನನ್ನನ್ನು ಸುತ್ತುವರೆದಿದ್ದ ಅಳಿಲುಗಳೆಲ್ಲಾ ನನಗೆ – ನನಗೆ ಎಂದು ಕಿತ್ತಾಡುತ್ತಿದ್ದಂತೆ ಭಾಸವಾಯಿತು.

ಇನ್ನೂ ಬ್ರೆಡ್ ತೆಗೆದುಕೊಂಡ ಅಳಿಲೊಂದು ಗುಂಪಿನಿಂದ ತಪ್ಪಿಸಿಕೊಂಡು, ದೂರದಲ್ಲಿ ನಿಂತಿದ್ದ ಪ್ರೇಯಸಿಗೆ ನೀಡಿತು. ಹಾಗೆ ಗೆಳೆಯರಂತಿದ್ದ ಒಂದಿಷ್ಟು ಅಳಿಲುಗಳು ತಮ್ಮತಮ್ಮಲ್ಲೇ ಕಿತ್ತಾಟತೊಡಗಿದವು. ಇನ್ನೂ ವಯಸ್ಸಾದವರಂತೆ ವರ್ತಿಸುತ್ತಿದ್ದ ಹಿರಿಯ ಅಳಿಲುಗಳು ಆಪಾಯವೆರಗಬಹುದು ಎಂದು ಅತ್ತಿಂದ ಇತ್ತ, ಇತ್ತಿಂದ ಅತ್ತ ನೋಡುತ್ತಿದ್ದವು. ತಿಂದು ಮುಗಿಸಿದ್ದ ಒಂದಿಷ್ಟು ಅಳಿಲುಗಳು ಗುದ್ದಾಡುತ್ತಾ, ಮುದ್ದಾಡುತ್ತಾ ಕಳ್ಳ– ಪೊಲೀಸ್ ಆಟ ಆಡುವಂತೆ ಇಡೀ ದಾರಿ ತುಂಬಾ ಓಡಾಡುತ್ತಿದ್ದವು. ಕೈಯಲಿದ್ದ ತಿನಿಸು ಖಾಲಿಯಾದ ನಂತರ ಹಾಗೆ ಮಾತಾಡುತ್ತಾ ಹೋಗುವಾಗ ಇನ್ನೊಂದು ಆಶ್ಚರ್ಯ ಕಾದಿತ್ತು. ಮರದ ಅಡಿಯಲ್ಲಿ ಜೋಡಿ ಅಳಿಲುಗಳು ಮುದ್ದಾಡುತ್ತಿದ್ದರೆ, ಇತ್ತ ದಾರಿ ಮಧ್ಯೆ ನಿಂತಿದ್ದ ಅಳಿಲು ಜೋರಾಗಿ ಬರುತ್ತಿದ್ದವನ ವಾಹನ ನಿಲ್ಲಿಸುವಂತೆ ಮಾಡಿತ್ತು. ಹಾಗೆ ಕ್ಯಾಂಟಿನ್ನ ಸುತ್ತ ಬಿದ್ದಿದ್ದ ತಿಂಡಿಯನ್ನು ತಿಂದು ಉಲ್ಲಾಸ, ಉತ್ಸಾಹದಿಂದಿರುವ ಈ ರಾಮನ ಭಕ್ತರ ಚೇಷ್ಟೆಗಳನ್ನು ಪ್ರತಿದಿನ ನೋಡುವುದೇ ಚಂದ.



ಸಾಂದರ್ಭಿಕ ಚಿತ್ರ

**– ಸುನೀಲ್‌ಗದೆಪ್ಪಗೋಳ**
**ಪತ್ರಿಕೋದ್ಯಮ ವಿದ್ಯಾರ್ಥಿ**

## 'ಸಹಕಾರ ಕ್ಷೇತ್ರಕ್ಕೂ ಆದ್ಯತೆ ಸಿಗಲಿ'

**ಒಂದನೇ ಪುಟದಿಂದ**

ಸಂಶೋಧನಾ ಮಾದರಿಯಲ್ಲೇ ಅಭಿ ನಂದನಾ ನುಡಿಗಳನ್ನಾಡಿದರು. 'ಕೃಷ್ಣಯ್ಯ ಅವರು ತಮ್ಮ ಸಂಶೋಧನೆ ಯಲ್ಲಿ ದೇಶಿತನಕ್ಕೆ ಒತ್ತು ನೀಡಿದ್ದಾರೆ. ಜತೆಗೆ ಪುಸ್ತಕ ಬರೆಯುವ ವಿಚಾರ ದಲ್ಲಿ ಎಂದಿಗೂ ಮಾನವೀಯ ಮೌಲ್ಯಗಳ ವಿಚಾರದ ಬಗ್ಗೆ ರಾಜಿ ಮಾಡಿ ಕೊಂಡವರಲ್ಲ' ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರು ವಿ.ವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಎಸ್.ಶಿವರಾಜಪ್ಪ, 'ಕ್ರಿಸ್ತ ಪೂರ್ವದಲ್ಲಿ ರಚನೆಯಾದ ಕೌಟಿಲ್ಯನ ಅರ್ಥಶಾಸ್ತ್ರ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಸಾರುವಂತಿದ್ದು, ಇಂದಿಗೂ ಸಕಾಲಿಕವಾಗಿದೆ' ಎಂದರು. ಅಭಿನಂದನಾ ಗ್ರಂಥ 'ಅರ್ಥ ಮಂದಾರ'ವನ್ನು ಡಾ.ಎಂ.ಮಾದಯ್ಯ, ಡಾ.ಎಚ್.ಆರ್.ಕೃಷ್ಣಯ್ಯಗೌಡ ಅವರ 'ಶ್ರೀ ಸಾಮಾನ್ಯರಿಗೆ ಅರ್ಥಶಾಸ್ತ್ರ' ಕೃತಿಯನ್ನು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ವಿ.ರಾಜೀವ್ ಲೋಕಾರ್ಪಣೆಗೊಳಿಸಿದರು.

ಕುಲಸಚಿವ ಪ್ರೊ. ಆರ್.ರಾಜಣ್ಣ, ಧಾರವಾಡ ವಿ.ವಿ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಎಸ್.ಟಿ.ಬಾಗಲಕೋಟಿ, ಕರ್ನಾಟಕ ಮಹಿಳಾ ಸಹಕಾರಿ ಬ್ಯಾಂಕ್ ಅಧ್ಯಕ್ಷೆ ಬಿ.ಸಿ.ಗೀತಾ, ಡಾ.ಎಚ್.ಆರ್.ಕೃಷ್ಣೇಗೌಡ, ಸಹಕಾರ ಸಂಘಗಳ ಜಂಟಿ ನಿಬಂಧಕ ಬಿ.ಆರ್.ಲಿಂಗರಾಜು, ಪ್ರಕಾಶಕ ಜಯದೇವ ಎಂ.ಮೆಣಸಗಿ, ಮೈಸೂರು ವಿ.ವಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ.ಇಂದಿರಾ, ಮಂಡ್ಯ ಜಿಲ್ಲೆಯ ಸರ್.ಎಂ.ವಿ.ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹಪ್ರಾಧ್ಯಾಪಕ ಡಾ.ಕೆ.ಶಿವಚಿತ್ತಪ್ಪ ಉಪಸ್ಥಿತರಿದ್ದರು.

## ಫುಟ್ಬಾಲ್: ನೇತಾಜಿ ಎಫ್ಸಿಗೆ ಗೆಲುವು

ನೇತಾಜಿ ಎಫ್‌ಸಿ ತಂಡದವರು ಮೈಸೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ ಆಶ್ರಯದ 'ಸಿ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಸಾಧಿಸಿದರು. ಮೈಸೂರು ವಿವಿ ಫುಟ್‌ಬಾಲ್ ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ನೇತಾಜಿ ಎಫ್‌ಸಿ 2–1 ಗೋಲುಗಳಿಂದ ಸ್ಪಿರಿಟೆಡ್ ಯೂತ್ ಎಫ್‌ಸಿ ತಂಡವನ್ನು ಮಣಿಸಿತು.

ರಾಜೇಶ್ ಅವರು 9ನೇ ನಿಮಿಷದಲ್ಲಿ ನೇತಾಜಿ ಎಫ್‌ಸಿಗೆ ಮುನ್ನಡೆ ತಂದಿತ್ತರು. ಅಜಿತ್ 35ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಸ್ಪಿರಿಟೆಡ್ ಎಫ್‌ಸಿ ಸಮಬಲ ಸಾಧಿಸಿತು. ಆದರೆ 50ನೇ ನಿಮಿಷದಲ್ಲಿ ಸೌರಭ್ ಅವರು ನೀಡಿದ 'ಉಡುಗೊರೆ' ಗೋಲಿನ ನೆರವಿನಿಂದ ನೇತಾಜಿ ಎಫ್‌ಸಿ ಗೆಲುವು ಪಡೆಯಿತು.

ಗುರುವಾರ ನಡೆದ ಪಂದ್ಯದಲ್ಲಿ ಮೆಟ್ರೊ ಎಫ್‌ಸಿ 3–0 ರಲ್ಲಿ ಜೈಭಾರತ್ ಎಫ್‌ಸಿ ತಂಡವನ್ನು ಮಣಿಸಿತು. ಶಹದಾ (10ನೇ ನಿ.), ರಕ್ಷಿತ್ (14ನೇ ನಿ.) ಮತ್ತು ಮಂಜುನಾಥ್ (22ನೇ ನಿ.) ಅವರು ವಿಜಯಿ ತಂಡದ ಪರ ಗೋಲು ಗಳಿಸಿದ್ದರು.

# ಹೀಗೊಂದು ಕ್ಯಾಂಪಸ್ ಕಥೆಯಲ್ಲ..., ಜೀವನ

ನಿತ್ಯವೂ ಮನೆಯಿಂದ ಗಂಗೋತ್ರಿಗೆ ಜನಜಂಗುಳಿಯ ಬಸ್ಸನ್ನಿಡಿದು ಪ್ರಯಾಣ. ಗಂಗೋತ್ರಿಯ ನಿಲ್ದಾಣಕ್ಕೆ ಬಂದ ನಂತರ ಶುರು ಒಂದು ಕ್ಯಾಂಪಸ್ ಜೀವನ. ಬಸ್ಸಿಂದ ಇಳಿಯುವಾಗಲೇ ಹುಡುಗಿಯರ ಇಣುಕಿ ನೋಡುವ ಆಟವೂ ಶುರು. ರೇಗಿಸುವುದು– ಬೈಸಿಕೊಳ್ಳುವುದು ನಮ್ಮ ಜನ್ಮ ಸಿದ್ದ ಹಕ್ಕು ಎಂಬ ಭಂಡತನ. ತರಗತಿಯಲ್ಲಿಶಿಸ್ತಿನ ವಿದ್ಯಾರ್ಥಿಯಂತೆ ಪಾಠ ಕೇಳುವುದು. ಬಿಡುವಿನ ವೇಳೆಯಲ್ಲಿ ಇತರ ವಿಭಾಗಗಳ ಕಡೆಗೋಗಿ, ಹೊಸದೊಂದನ್ನು ತಿಳಿದುಕೊಳ್ಳುವ ಕುತೂಹಲ ಒಳ್ಳೆಯುಮೂಡಿನಲ್ಲಿದ್ದಾಗ ಶಿಸ್ತಾಗಿ ಗ್ರಂಥಾಲಯದಲ್ಲಿ ಋದುವ ಹವ್ಯಾಸ. ಒತ್ತಡ ಹಾಗೂ ಬೇಜಾರಾದ ಸಮಯ ಗಂಗೋತ್ರಿ ಭಯ ವಿವಿಧ ಪಾರಂಪರಿಕ ಕಟ್ಟಡ, ಸುಂದರಸ್ಥಳಗಳ ಅಲೆದಾಟ, ಸೆಲ್ಫಿಯ ಲಘು ಬಗೆಯ ಹುಚ್ಚಾಟ. ಈ ವೇಳೆ ಸುಂದರವಾಗಿ ಕಂಡ ಯುವತಿಯ ಮೆಚ್ಚಿಸಲು ಒಂದಿಷ್ಟು ಮಂಗನಾಟಗಳ ಪ್ರದರ್ಶನ. ಮಂಗನಾಟವಿಫಲನಾಗಿ, ಮರಳಿ ತನ್ನೊಲವನ್ನು ಸಂಪಾದಿಸುವ ವೇಳೆಗೆ, ಜೀವನಕ್ಕೆ ಅಗತ್ಯವಾದ ಒಂದಿಷ್ಟು ಮೌಲ್ಯಗಳ ಕಲಿಯುವಿಕೆ.

ತರಗತಿಗಳು ಮುಗಿದ ನಂತರ ಕ್ಯಾಂಟಿನ್ ನತ್ತ ಹೆಜ್ಜೆ , ಬಿಸಿ–ಬಿಸಿ ಟೀಯನ್ನು ಹೀರುತ್ತಾ, "ಮೈಂಡ್ ರಿಫ್ರೇಶ್ ಮೆಂಟ್" ಮಾಡಿಕೊಳ್ಳುವ ಚಾಳಿ, ಸಾಗುತ ಸಾಗುತಚಟ.. ಆ ಮೇಲೆ ಇದರ ಪರಿಣಾಮವನ್ನರಿತು ಆ ಚಟವನ್ನು ಬಿಟ್ಟು, ಕಾಫಿ ಇಲ್ಲವೇ ಹಾಲಿಗೆ ಚಾಳಿ ಬದಲಿಸುವ ಪರಿವರ್ತನೆಯ ನಿಯಮ.

ಕ್ಯಾಂಟಿನ್ ನಲ್ಲಿ ವಿವಿಧ ವಿಭಾಗಗಳ ಒಂದಿಷ್ಟು ಸಂಶೋಧಕರ ಗುಂಪು, ವಿದ್ಯಾರ್ಥಿ ಬಳಗಕ್ಕೆ ಹತ್ತಿರವಿದ್ದಂತಿದ್ದ ಪ್ರೊಫೆಸರ್ ಗಳೆಂಬ ಸರಳ ಜೀವಿಗಳು... ಓದಿ ಓದಿಸಾಕಾಗಿ ಸ್ವಲ್ಪ ಹೊತ್ತು ವಿರಮಿಸಲು ಬರುತ್ತಿದ್ದ – ಭವಿಷ್ಯದ ಕನಸನ್ನೊತ್ತ ಶ್ರಮಜೀವಿಗಳು. ಹರಟೆ ಹೊಡೆಯಲಿಕ್ಕೆಂದೇ ಹುಟ್ಟಿಕೊಂಡ ಒಂದಷ್ಟು ಸಮಾನ ಮನಸ್ಸುಗಳು.




ಈ ಇಳಿಸಂಜೆಯ ಅದ್ಭುತ ವಾತಾವರಣಕ್ಕಾಗಿ ಮುಂಜಾನೆಯಿಂದಲೂ ಕಾದುಕುಳಿತಿದ್ದ ಕೆಂಪು ಚೇರುಗಳು... ಯಾರೇ ಕೂಗಾಡಲಿ– ಊರೇ ಹೋರಾಡಲಿ ನನ್ನನೆಮ್ಮದಿಗೆ ಭಂಗವಿಲ್ಲ ಎಂಬಂತೆ ಮಾರುದ್ದ ತಲೆಯನ್ನೆತ್ತಿ ನಿಂತಿದ್ದ ಕ್ಲಾಕ್ ಟವರ್.. ಇದನ್ನ ನೋಡುತಾ ಸುಮ್ಮನೆ ಹೋಗಲಾಗದ ಪರಿಸರ ಪ್ರೇಮಿಗಳಿಗೆ ಒಂದು ಘಳಿಗೆಕೂತು ನೋಇ, ಮನಮುದಗೊಳಿಸಿಕೊಳ್ಳುವ ಒಂದಿಷ್ಟು ವಿಶೇಷ ವಿದ್ಯಾರ್ಥಿ ಸಮೂಹ.. ಆರೋಗ್ಯದ ಕಾಳಜಿಯನ್ನೊತ್ತು ಒಂದಿಷ್ಟು ಕಾಲ ವಾಯು ವಿಹಾರಕ್ಕೆ ಬರುವಆಂಕಲ್– ಆಂಟಿ, ಅಜ್ಜ ಅಜ್ಜಿಯರ ಚಿತ್ರಣ, ಎತ್ತ ಹೋದರತ್ತ ನಿಶ್ಯಬ್ದ ವಾತಾವರಣವನ್ನೊತ್ತ ಹೀಗೊಂದು ಚಿತ್ರಣ ಕಥೆಯಲ್ಲ ಕ್ಯಾಂಪಸ್ ನ ಜೀವನ..

ರಾಜ್ಯದ, ದೇಶದ, ಜಗತ್ತಿನ ಯಾವ ಮೌಲ್ಯಯಿಂದ ಇಲ್ಲಿಗೆ ಬಂದರೂ ಸುಲಭವಾಗಿ ಹೊಂದಿಕೊಳ್ಳುವಂತ ಸುಂದರ ವಾತಾವರಣ. ಇದು ಗಂಗೋತ್ರಿಯ ವಿಶೇಷತೆ.ಜೀವನದಲ್ಲಿ ಯಶಸ್ಸು ಸಾಧಿಸಲೂ ಹಾಗೆಯೇ ಬದುಕಿನ ಹಾದಿ ತಪ್ಪಲು ಅದ್ಭುತ ವಾತಾವರಣವು ಇಲ್ಲಿದೆ. ಗಂಗೋತ್ರಿಯ ಎರಡು ವರ್ಷದ ಸ್ನಾತಕೋತ್ತರಅಧ್ಯಯನವೆಂದರೆ ಎರಡು ಫ್ರೇಶರ್ ಪಾರ್ಟಿ ಮತ್ತು ಎರಡು ಫೇರ್ ವೆಲ್ ಪಾರ್ಟಿ ಎಂಬಂತಹ ಭಾವನೆ ಕೆಲವರು ಬಂದಿರುವುದುಂಟು..

ಅಂತೂ ಪ್ರತಿದಿನ ವಾಪಸ್ ಬಸ್ಸನ್ನೇರಿ ಮನೆಗೆ ಹೋಗುವ ವರೆಗೆ ವಿಶ್ವ ವಿದ್ಯಾಲಯವು ವಿಶ್ವದಲ್ಲೇ ಹೋದರೂ ಬದುಕು ನಡೆಸುವ ಮಾರ್ಗದರ್ಶನದ ಕೈಪಿಡಿಯಾಗಿನಮ್ಮ ಕಣ್ಣ ಮುಂದಿದೆ...

**– ಶಾಂತ ರಾಜು**

**ದ್ವಿತೀಯ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ**

# ನೆನಪಿದೆಯಾ ಮೊದಲಾ ಭೇಟಿ..



ನೆನಪಿದೆಯಾ ನಿನಗೆ ನಮ್ಮ ಮೊದಲ ಭೇಟಿ. ಅಂದು ನೀನು ಕ್ಯಾಂಟೀನ್‌ನಲ್ಲಿ ನಿನ್ನ ಸಂಗಡಿಗರೊಂದಿಗೆ ಮಾತನಾಡುತ್ತಿದ್ದೆ. ಅರೆ, ಯಾವುದಿದು ಹೊಸ ಗುಂಪು ಎಂದು ಕುತೂಹಲದಿಂದ ನೋಡಿದೆ. ಆಗ ಆಕಸ್ಮಿಕವಾಗಿ ನನ್ನನ್ನು ಸೆಳೆದಿದ್ದು ನಿನ್ನ ಮುಂಗುರುಳ ತುದಿಯಲ್ಲಿನ ಕಣ್ಣಂಚಿನ ಬೆಳಕು.

ಸಾಂದರ್ಭಿಕ ಚಿತ್ರ



ಆ ಕ್ಷಣದಿಂದ ನಿನ್ನಹಿಂದೆ ಸುತ್ತುವುದು, ನಿನ್ನ ಬರುವಿಕೆಗೆ ಕಾಯುವುದು, ನನ್ನ ದಿನನಿತ್ಯದ ಕಾರ್ಯ ಕ್ರಮಗಳಲ್ಲಿ ಒಂದಾಯಿತು. ನಿನ್ನ ಬಗ್ಗೆ ತಿಳಿಯಲು ನಿನ್ನ ಗೆಳೆಯರನ್ನೆಲ್ಲಾ ಕಾಡಿದ ಕ್ಷಣಗಳು ಈಗಲೂ ನನಗೆ ನಗು ತರಿಸುತ್ತದೆ. ನಿನ್ನ ನೋಡುವುದಕ್ಕಾಗಿಯೇ ಕಾಲೇಜಿನ ಆವರಣವನ್ನು ಮೂರು ಸುತ್ತು ಬಳಸಿ ಮುಂದೆ ಬರುತ್ತಿದ್ದೆ. ನೀನು ಬರುತ್ತಿದ್ದಂತೆ ಗೆಳೆಯರೆಲ್ಲ ನನ್ನನ್ನು ಕಿಚಾಯಿಸುತ್ತಿದ್ದುದನ್ನು ಕಂಡು ನನ್ನ ಹೃದಯದ ಬಡಿತ ಸಮುದ್ರದ ಅಲೆಗಳಂತೆ ಏರಿಳಿತವಾಗುತ್ತಿತ್ತು.

ನಿನ್ನ ಮುಂದೆ ಒಲವಿನ ನಿವೇದನೆಗೆ ನಿಂತ ನೂರೆಂಟು ದಿನಗಳು ಉಂಟು. ಆದರೆ, ನನಗೆ ಅರಿಯದೆ ಬಚ್ಚಿಟ್ಟುಕೊಂಡ ನೆನಪುಗಳು ಮಾತ್ರ ನನ್ನ ಗಂಟು. ಕನಸಿನಲ್ಲಿ ಕಾಡುತ್ತಿದ್ದರೂ, ನನಸಿನಲ್ಲಿ ಕಾಣುತ್ತಿದ್ದೆ. ಈಗಲೂ ನನ್ನ ಮೇಲೆ ನಿನಗೆ ಏನೆಂದು ಅಭಿಪ್ರಾಯವಿದೆ ಎಂಬುದು ತಿಳಿದಿಲ್ಲ. ಆದರೆ, ಪ್ರತಿ ಬಾರಿ ಗಮನಿಸಿದಾಗ ನಿನ್ನ ನೋಟದಲ್ಲಿ ನನಗೆ ಅರಿಯದ ಒಂದು ಭಾವನೆ ಕಾಣಿಸಿದೆ. ನಿನ್ನೆದೆಯ ಅಂಗಡಿಯಲ್ಲಿ ಒಲವು ಖರೀದಿಸಲು ಅನುಮತಿ ನೀಡುವೆಯಾ... ಒಂದು ಬಾರಿ ಒಪ್ಪಿಕೋ ಸಾಕು. ನಿನ್ನ ಹೃದಯದಲ್ಲಿ ಸೆರೆಯಾಗುವ ಆಸೆ ನನ್ನದಾಗಿದೆ. ಓ ಒಲವೇ ನನ್ನನ್ನು ನಿನ್ನ ಹೃದಯ ಬಂಧಿಖಾನೆಯಲ್ಲಿ ಶಾಶ್ವತವಾಗಿ ಬಂಧಿಸುವೆಯಾ..? ಇನ್ನು ನಿನ್ನ ವಾರಂಟಿಗಾಗಿಯೇ ಕ್ಯಾಂಟೀನ್‌ನಲ್ಲಿ ಕಾಯುತ್ತಿರುವ ನಿನ್ನ ಹುಡುಗ

**– ಎಂ.ಅಭಿಷೇಕ್**

## ಮೈಸೂರು ವಿವಿ ಅಂತರ ಕಾಲೇಜು ಮಹಿಳಾ ಕ್ರೀಡಾಕೂಟ



ಕೊಕ್ಕೊ ಟೂರ್ನಿಯಲ್ಲಿ ಚಾಂಪಿಯನ್ ಆದ ತಿ.ನರಸೀಪುರದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ತಂಡ

ತಿ.ನರಸೀಪುರದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ತಂಡದವರು ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಆಯೋಜಿಸಿರುವ ಅಂತರ ಕಾಲೇಜು ಮಹಿಳಾ ಕ್ರೀಡಾಕೂಟದ ಕೊಕ್ಕೊ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ವಿದ್ಯೋದಯ ಕಾಲೇಜು ತಂಡ 13 – 7 ರಲ್ಲಿ ಪಿಜಿಎಸ್‌ಸಿ ಮಾನಸಗಂಗೋತ್ರಿ ತಂಡವನ್ನು ಮಣಿಸಿತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಭಾರತೀನಗರದ ಭಾರತೀ ಕಾಲೇಜು ತಂಡ 5 – 4 ರಲ್ಲಿ ಕ್ಯಾತನಹಳ್ಳಿ ಪ್ರಥಮದರ್ಜೆ ಕಾಲೇಜು ತಂಡದ ವಿರುದ್ಧ ಜಯ ಸಾಧಿಸಿತು.

ಫೈನಲ್‌ಗೆ ಟೆರೆಷಿಯನ್: ನಗರದ ಟೆರೆಷಿಯನ್ ಕಾಲೇಜು ಮತ್ತು ಹುಣಸೂರಿನ ಸರ್ಕಾರಿ ಮಹಿಳಾ ಕಾಲೇಜು ತಂಡಗಳು ಇದೇ ಕ್ರೀಡಾಕೂಟದ ಕಬಡ್ಡಿ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಟೆರೆಷಿಯನ್ ಕಾಲೇಜು ತಂಡದವರು ಹಾಸನದ ಸರ್ಕಾರಿ ಮಹಿಳಾ ಕಾಲೇಜು ವಿರುದ್ಧವೂ, ಹುಣಸೂರಿನ ತಂಡದವರು ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಂಡದ ಮೇಲೂ ಗೆಲುವು ಪಡೆದರು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಹಾಸನದ ತಂಡ ಕುದೇರು ತಂಡವನ್ನು ಮಣಿಸಿತು.

# ಥ್ರಿಲ್ಲರ್ ಕಥೆಗೆ ಹಾಸ್ಯದ ಮೂಲಕ ಮನರಂಜನೆ

**ಚಿತ್ರ ವಿಮರ್ಶೆ**




ಒಂದು ದೃಶ್ಯ ಅಥವಾ ಒಂದು ನೃತ್ಯದ ಮೂಲಕ ಮನರಂಜನೆ ನೀಡಲು ಸೀಮಿತವಾಗಿದ್ದ ರೆಟ್ರೊ ಶೈಲಿಯನ್ನು ಇಡೀ ಚಿತ್ರಕ್ಕೆ ಒಗ್ಗಿಸಿರುವ ನಿರ್ದೇಶಕ ಜಯತೀರ್ಥ, ಅದರಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ.

ಹಳೇ ಬೇರಿನಂಥ ಕಥೆಗೆ ಹೊಸ ಚಿಗುರಿನಂತಹ ಸಂಭಾಷಣೆ ಸೇರಿಸಿ ಪ್ರೇಕ್ಷಕರ ಮುಂದಿಟ್ಟಿದ್ದಾರೆ.

70–80ರ ದಶಕದ ಕ್ರೈಮ್ ಥ್ರಿಲ್ಲರ್ ಸಿನಿಮಾಗಳನ್ನು ಕಣ್ಮುಂದೆ ತರುವ 'ಬೆಲ್ ಬಾಟಂ' ತನ್ನ ಕಾಮಿಡಿ ಟೈಮಿಂಗ್‌ನಿಂದ ಪ್ರೇಕ್ಷಕರನ್ನು ರಂಜಿಸುತ್ತದೆ. ಪೊಲೀಸ್ ಠಾಣೆಗಳಲ್ಲಿ ಪೊಲೀಸರೆದುರೇ ಆಗುವ ದರೋಡೆಯ ಹಿಂದಿನ ಕೈಗಳನ್ನು ಪತ್ತೆ ಹಚ್ಚುವ ಡಿಟೆಕ್ಟಿವ್ ದಿವಾಕರ್ನ ಪಾತ್ರದಲ್ಲಿ ರಿಷಬ್ ಶೆಟ್ಟಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕನ ಕ್ಯಾಪ್ ತೆಗೆದು, ಪತ್ತೇದಾರನ ಕ್ಯಾಪ್ ಧರಿಸಿರುವ ಅವರು, ರಘು ನಿಡುವಳ್ಳಿ ಅವರ ಚಿನಕುರಳಿ ಸಂಭಾಷಣೆಯನ್ನು ಅಷ್ಟೇ ಸಹಜವಾಗಿ ಪ್ರೇಕ್ಷಕರಿಗೆ ದಾಟಿಸುವ ಮೂಲಕ ಸ್ಕೋರ್ ಮಾಡುತ್ತಾರೆ. ಕೆಲವೊಮ್ಮೆ ಅವರ 'ಡೈಲಾಗ್ ಡೆಲಿವರಿ' ರಕ್ಷಿತ್ ಶೆಟ್ಟಿಯವರನ್ನೇ ನೆನಪಿಸಿದರೆ, ಅವರು 'ಕಾಗೆ ಮುದುಕಿ' ಸಂಭಾಷಣೆ ಹೇಳುವಾಗ ಜಗ್ಗೇಶ್ ಅವರ ಮ್ಯಾನರಿಸಂ ಕಾಣಿಸುತ್ತದೆ. ಇನ್ನು ಅವರು ಧಾರಾಳವಾಗಿ ಹಾಸ್ಯಪ್ರಧಾನ ಕೌಟುಂಬಿಕ ಚಿತ್ರಗಳ ನಾಯಕನ ಪಾತ್ರಕ್ಕೆ 'ಟವೆಲ್' ಹಾಕಬಹುದು!

ಮಾಡ್ ಡ್ರೆಸ್‌ಗಳಲ್ಲಿ ಪ್ರೇಕ್ಷಕರ ಹೃದಯಕ್ಕೆ ಕೊಳ್ಳಿ ಇಟ್ಟಿದ್ದ ಹರಿಪ್ರಿಯಾ, ರೆಟ್ರೊ ಡ್ರೆಸ್‌ಗಳಲ್ಲೂ ಅಷ್ಟೇ ಮುದ್ದಾಗಿ ಕಾಣುತ್ತಾರೆ. ನಾಯಕನ ಜೊತೆ ಮರ ಸುತ್ತುವುದಕ್ಕೆ ಅವರು ಸೀಮಿತವಾಗಿಲ್ಲ. ಕಥೆಯ ಪ್ರಮುಖ ಎಳೆಯಾಗಿ ಅವರ ಪಾತ್ರ ಪೋಷಣೆ ಇದೆ.

ಸಹಜ ಅಭಿನಯದ ಮೂಲಕ ಅಚ್ಯುತಕುಮಾರ್ ಗಮನ ಸೆಳೆಯುತ್ತಾರೆ. ರಿಷಬ್ ಶೆಟ್ಟಿ ಜೊತೆಗೆ, ಯೋಗರಾಜ ಭಟ್ ಮತ್ತು ಶಿವಮಣಿಯಂತಹ ಮತ್ತಿಬ್ಬರು ನಿರ್ದೇಶಕರಿಗೂ ಜಯತೀರ್ಥ ಆ?ಯಕ್ಷನ್ ಕಟ್ ಹೇಳಿದ್ದಾರೆ. ಎಲ್ಲ ಪಾತ್ರಗಳೂ ಕಥೆಗೆ ಪೂರಕವಾಗಿರುವುದರಿಂದ ಎಲ್ಲರ ಅಭಿನಯವೂ ಚೆನ್ನಾಗಿ ಬಂದಿದೆ.

ಸಿನಿಮಾಗೆ ವೇಗ ಒದಗಿಸಿರುವುದು ಬಿ. ಅಜನೀಶ್ ಲೋಕನಾಥ್ ಅವರ ಸಂಗೀತ. 'ಏತಕೆ ಬೊಗಸೆ ತುಂಬಾ...'ಹಾಡು ಮತ್ತದರ ಮೇಕಿಂಗ್ ಚೆನ್ನಾಗಿದೆ. ದೃಶ್ಯ? ಸಂಭಾಷಣೆ? ಸ್ಪೇಸ್‌ಅನ್ನು ಹಿನ್ನೆಲೆ ಸಂಗೀತ ಸಮರ್ಥವಾಗಿ ತುಂಬಿದೆ.

ಸುಮಾರು ನಾಲ್ಕು ದಶಕದ ಹಿಂದಿನ ಜನಜೀವನಕ್ಕೆ ತಕ್ಕ ವಸ್ತ್ರವಿನ್ಯಾಸ ಮಾಡುವ ಸವಾಲನ್ನು ಪ್ರಗತಿ ರಿಷಬ್ ಶೆಟ್ಟಿ ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಚಿತ್ರವನ್ನು ಈಸ್ಟ್‌ಮನ್ ಕಲರ್‌ನಂತಹ ಚೌಕಟ್ಟಿನಲ್ಲಿ ಅಂದವಾಗಿ ತೋರಿಸಿದ್ದಾರೆ ಛಾಯಾಗ್ರಾಹಕ ಅರವಿಂದ್ ಕಶ್ಯಪ್ ಮತ್ತು ಸಂಕಲನಕಾರ ಕೆ.ಎಂ. ಪ್ರಕಾಶ್. ಕೆಲವು ದೃಶ್ಯಗಳು ತರ್ಕಕ್ಕೆ ನಿಲುಕುವುದಿಲ್ಲ. ಆದರೆ, ಸಿನಿಮಾ ಮಾತ್ರ ಕೊಟ್ಟ ದುಡ್ಡಿಗೆ ಮೋಸ ಮಾಡುವುದಿಲ್ಲ. ಒಂದೊಳ್ಳೆ ಪತ್ತೇದಾರಿ ಕಾದಂಬರಿ ಓದಿದ ಅನುಭವವನ್ನು 'ಬೆಲ್ ಬಾಟಂ' ನೀಡುತ್ತದೆ.